# ಅಭಿಮಾನಿಗಳ ಕಣ್ಣರಳಿಸಿದ ಕಾರ್ತಿಕ್ ಅಥ್ಲೀಟ್ ದೇಹ




ನಿರ್ದೇಶಕ ಕಬೀರ್ ಖಾನ್ ಅವರಿಗೊಂದು ಅಭಿರುಚಿ ಇದೆ. ಕೆಲವೇ ದೃಶ್ಯಗಳ ಮೂಲಕ ಚಿತ್ರವನ್ನು ಎತ್ತಿ ನಿಲ್ಲಿಸಬಲ್ಲ ನಿಸ್ಸೀಮ. ಜನಪ್ರಿಯ ಶೈಲಿಯ ಸಿನಿಮಾ ಚಿತ್ರೀಕರಣ ಶುರುವಾದಾಗಿನಿಂದ ಬಿಡುಗಡೆಯಾಗುವವರೆಗೆ ಹಾಗೂ ಆ ನಂತರದ ಯೋಜನೆ ರೂಪಿಸುವಲ್ಲಿಯೂ ಅವರು ಸಾಕಷ್ಟು ಮುಂದಿದ್ದಾರೆ ಎಂದೆಲ್ಲ ಈ ಹಿಂದೆ ಸಲ್ಮಾನ್ ಖಾನ್ ಹೊಗಳಿದ್ದರು. 'ಚಂದು ಚಾಂಪಿಯನ್' ಹಿಂದಿ ಸಿನಿಮಾದ ಮೊದಲ ಪೋಸ್ಟರ್ ಪ್ರಕಟವಾದದ್ದೇ ಇದು ನಿಜ ಎನ್ನಿಸತೊಡಗಿದೆ.

ಸಾಜಿದ್ ನಾಡಿಯಾಡ್‌ವಾಲಾ ನಿರ್ಮಾಣದ ಈ ಸಿನಿಮಾದ ನಾಯಕ ಸಲ್ಮಾನ್ ಖಾನ್ ಅಲ್ಲ; ಕಾರ್ತಿಕ್ ಆರ್ಯನ್. ಚಿತ್ರೀಕರಣದ ಸಂದರ್ಭದಲ್ಲಿ ಅಶಿಸ್ತಿನ ಕಾರಣದಿಂದಾಗಿಯೇ ಈ ಹಿಂದೆ ಸುದ್ದಿಯಾಗಿದ್ದ ಕಾರ್ತಿಕ್, ತಮ್ಮ ಇಡೀ ದೇಹವನ್ನು ಈ ಸಿನಿಮಾಗಾಗಿ ದೊಡ್ಡ ಮಟ್ಟದಲ್ಲಿ ಬದಲಿಸಿಕೊಂಡಿದ್ದಾರೆ ಅರ್ಥಾತ್ ರೂಪಿಸಿಕೊಂಡಿದ್ದಾರೆ. ಅಥ್ಲೀಟ್ ಒಬ್ಬರ ಮಣಿಕಟ್ಟು, ತೊಡೆಯ ಸ್ನಾಯುಗಳು ಹೇಗಿರಬೇಕೋ ಇವರದ್ದೂ ಹಾಗೆಯೇ ಇವೆ. ಎದೆಗೂಡಿನ ಮೂಳೆಗಳನ್ನು ಎಣಿಸಬಹುದಾದರೂ, ಅವುಗಳ ಮೇಲೆ ಸಾಂದ್ರವಾಗಿರುವ ಗಟ್ಟಿ ಸ್ನಾಯುಗಳು ಪಾತ್ರದ ರೂಹಿಗೆ ತಕ್ಕಹಾಗೆಯೇ ಕಾಣುತ್ತವೆ. 'ಭಾಗ್ ಮಿಲ್ಖಾ ಭಾಗ್' ಸಿನಿಮಾದಲ್ಲಿ ಫರ್ಹಾನ್ ಅಖ್ತರ್ ಅವರೂ ಇದೇ ರೀತಿ ದೇಹ ಪರಿವರ್ತನೆ ಮಾಡಿಕೊಂಡಿದ್ದರು.



'ಫ್ರೆಡ್ಡಿ' ಚಿತ್ರಕ್ಕಾಗಿ ದೇಹತೂಕವನ್ನು 14 ಕೆ.ಜಿ.ಯಷ್ಟು ಹೆಚ್ಚಿಸಿಕೊಂಡಿದ್ದ ಆರ್ಯನ್, ಈ ಸಿನಿಮಾದ ಪಾತ್ರಕ್ಕಾಗಿಯೇ ವಿಪರೀತ ತೆಳುವಾಗಿದ್ದಾರೆ. ಈ ಪರಿವರ್ತನೆಯನ್ನು ಅನೇಕರು 'ನಾಟಕೀಯ' ಎಂದು ಬಣ್ಣಿಸಿದ್ದಾರೆ. ಕೆಲವರು, 'ಫೋಟೊಶಾಪ್ ಬಳಸಿ ಈ ರೀತಿ ಪೋಸ್ಟರ್ ಮಾಡಿದ್ದಾರೇನೊ' ಎಂದು ಗುಮಾನಿಯನ್ನೂ ವ್ಯಕ್ತಪಡಿಸಿದ್ದಾರೆ. ಕಾರ್ತಿಕ್ ಆರ್ಯನ್ ತಮ್ಮ ಸಾಮಾಜಿಕ ಮಾಧ್ಯಮದ ಖಾತೆಗಳಲ್ಲಿ 'ಅಂದು... ಇಂದು' ಎಂಬ ಶೀರ್ಷಿಕೆ ಕೊಟ್ಟು, ಅವರದ್ದೇ ತೂಕ ಹೆಚ್ಚಾಗಿದ್ದ ಹಾಗೂ ಈಗ ಬದಲಾಗಿರುವ ಸ್ವರೂಪದ ಚಿತ್ರಗಳನ್ನು ಪೋಸ್ಟ್ ಮಾಡಿದ್ದಾರೆ.

ಪ್ಯಾರಾಲಿಂಪಿಕ್‌ನಲ್ಲಿ ಮೊದಲ ಚಿನ್ನದ ಪದಕ ಗೆದ್ದ ಭಾರತದ ಮುರಳೀಕಾಂತ್ ರಾಜಾರಾಮ್ ಪೇಟ್ಕರ್ ಅವರ ಬದುಕಿನ ಕಥನವನ್ನು ಒಳಗೊಂಡ ಸಿನಿಮಾ 'ಚಂದು ಚಾಂಪಿಯನ್'.

1972ರ ಸಮ್ಮರ್ ಒಲಿಂಪಿಕ್ಸ್‌ನಲ್ಲಿ ಹೀಡೆಲ್‌ಬರ್ಗ್‌ನಲ್ಲಿ 50 ಮೀಟರ್ ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ ಅವರು ಬಂಗಾರ ಗೆದ್ದಿದ್ದರು. ಅಷ್ಟೇ ಅಲ್ಲ, ಜಾವೆಲಿನ್, ಪ್ರೆಸಿಷನ್ ಜಾವೆಲಿನ್ ಥ್ರೋ ಹಾಗೂ ಸ್ಲ್ಯಾಲಂ ಸ್ಪರ್ಧೆಗಳಲ್ಲೂ ಭಾಗಿಯಾಗಿದ್ದರು. ಎಲ್ಲದರಲ್ಲೂ ಅಂತಿಮ ಘಟ್ಟ ತಲುಪಿದ್ದರೆನ್ನುವುದು ವಿಶೇಷ. ಮಹಾರಾಷ್ಟ್ರದ ಸಾಂಗ್ಲಿಯ ಈ ಪ್ಯಾರಾ ಅಥ್ಲೀಟ್ ಅನೇಕರಿಗೆ ಸ್ಫೂರ್ತಿಯಾಗಿದ್ದರು.

'ಚಂದು ಚಾಂಪಿಯನ್' ಸಿನಿಮಾ ಜೂನ್‌ನಲ್ಲಿ ತೆರೆಕಾಣಲಿದೆ. ■

# ಡಬಲ್ ಇಸ್ಮಾರ್ಟ್‌ನಲ್ಲಿ ಸಂಜಯ್ ದತ್



'ಇಸ್ಮಾರ್ಟ್ ಶಂಕರ್' ತೆಲುಗು ಸಿನಿಮಾ ದೊಡ್ಡ ಹಿಟ್ ಆಗಿತ್ತು. ಅದರ ಸೀಕ್ವೆಲ್ 'ಡಬಲ್ ಇಸ್ಮಾರ್ಟ್' ಸಿನಿಮಾ ತೆರೆಗೆ ಬರಲು ಸಿದ್ಧವಾಗುತ್ತಿದೆ. ರಾಮ್ ಪೋತಿನೇನಿ ಅಭಿನಯದ ಈ ಸಿನಿಮಾ ನಿರ್ದೇಶಕ ಪೂರಿ ಜಗನ್ನಾಥ್ ಅವರಿಗೂ ಮುಖ್ಯವಾಗಿದೆ. ಈ ಚಿತ್ರದಲ್ಲಿ ಹಿಂದಿ ನಟ ಸಂಜಯ್ ದತ್ ನಟಿಸಿರುವುದು ವಿಶೇಷ.

ಮೊದಲ ಭಾಗದಲ್ಲಿ ಇಬ್ಬರು ಹುಡುಗಿಯರ ಜೊತೆ ಕಿರಿಕ್ ಮಾಡಿಕೊಂಡೇ ಇರುವ ಕೇಂದ್ರ ಪಾತ್ರದಲ್ಲಿ ರಾಮ್ ನಟಿಸಿದ್ದರು. ಹಾಡು, ಕುಣಿತ, ಹಾಸ್ಯ, ಹೊಡೆದಾಟ ಎಲ್ಲವುಗಳ ಮಸಾಲೆಯನ್ನು ಆ ಸಿನಿಮಾದಲ್ಲಿ ಪೂರಿ ಚೆನ್ನಾಗೇ ಅರೆದಿದ್ದರು. ಎರಡನೇ ಭಾಗದಲ್ಲಿ ಕೂಡ ಒಳ್ಳೆಯ ಮಸಾಲೆ ಇದೆ ಎಂದವರು ಹೇಳಿದ್ದಾರೆ.

ರಾಮ್ ಅವರ ಹುಟ್ಟುಹಬ್ಬ ಮೇ 15ರಂದು ಸಿನಿಮಾದ ಟೀಸರ್ ಬಿಡುಗಡೆಯಾಯಿತು. 'ಚಂದ್ರಲೇಖ' ತೆಲುಗು ಚಿತ್ರದಲ್ಲಿ ಸಂಜಯ್ ದತ್ 1998ರಲ್ಲಿ ಒಂದು ಸಣ್ಣ ಪಾತ್ರದಲ್ಲಿ ನಟಿಸಿದ್ದರು. ಅದಾದ ನಂತರ ಈ ಭಾಷೆಯ ಸಿನಿಮಾವೊಂದರಲ್ಲಿ ಅವರು ಈಗಲೇ ಅಭಿನಯಿಸುತ್ತಿರುವುದು. ಅವರ ಉಪಸ್ಥಿತಿಯಿಂದ ಸಿನಿಮಾದ ವಜನು ಹೆಚ್ಚಾಗಲಿದೆ ಎನ್ನುವ ನಂಬಿಕೆ ಪೂರಿ ಅವರಿಗೆ ಇದೆ. ■